LIBRARY
BMS COLLEGE OF LAW
Temple Road, Basavanagudi,
Bengaluru - 560 019.

4010/5069/6029/7029

II Semester 3 Years LL.B./VI Semester 5 Year B.A.LL.B. (Maj.-Min. System)/ B.B.A.LL.B./B.Com.LL.B. Examination, September/October 2023
(June 2023)
PROPERTY LAW

Duration : 3 Hours | Max. Marks : 80

Instructions :
1. **Answer all 5 Units.**
2. **One essay type question and a short note/problem is compulsory from each Unit.**
3. **Figures to the right indicate marks.**
4. **Answer should be written completely in English or in Kannada.**

UNIT – I

Q. No. 1. (a) Define transfer of property. What are the essentials of valid transfer ? Marks : 10

ಆಸ್ತಿ ವರ್ಗಾವಣೆಯನ್ನು ವ್ಯಾಖ್ಯಾನಿಸಿರಿ. ವಿಧಿಬದ್ಧವಾದ ವರ್ಗಾವಣೆಯ ಅಗತ್ಯಗಳು ಯಾವುವು ?

OR/ಅಥವಾ

(a) Define the term "a mere right to sue" and "actionable claim". How do you distinguish between these two ?

"ಕೇವಲ ದಾವೆ ಮಾಡುವ ಹಕ್ಕು" ಮತ್ತು "ವಾದಯೋಗ್ಯ ಹಕ್ಕು" ದಾವೆಗಳನ್ನು ವ್ಯಾಖ್ಯಾನಿಸಿ ಮತ್ತು ಈ ಎರಡನ್ನು ನೀವು ಹೇಗೆ ವ್ಯತ್ಯಸಿಸುವಿರಿ ?

Q. No. 1. (b) Write a note on types of notice. Marks : 6

ಸೂಚನೆಯ ವಿವಿಧ ಬಗೆಗಳ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

(b) 'A' transfers his property to 'B' with a direction that the income arising from the property should be accumulated for a period of 5 years to discharge 'A' debt of 5 lakh. Decide.

'A'ಯು ತನ್ನ ಸ್ಥತ್ತನ್ನು 'B' ಎಂಬುವನಿಗೆ ವರ್ಗಾಯಿಸಿ ಹಸ್ತಾಂತರವಾದ ನಂತರ ಆ ಸ್ಥತ್ತಿನಿಂದ ಬರುವ ಆದಾಯವನ್ನು 'A'ಯ ಸ್ವಂತ ಸಾಲ 5 ಲಕ್ಷಗಳನ್ನು ತೀರಿಸುವ ಸಲುವಾಗಿ 5 ವರ್ಷಗಳ ಕಾಲ ಶೇಖರಿಸಿಡಬೇಕೆಂದು ನಿರ್ದೇಶನ ನೀಡುವನು. ಈ ರೀತಿಯ ನಿರ್ದೇಶನವು ಸರಿಯೇ ತೀರ್ಮಾನಿಸಿ.

P.T.O.

UNIT – II

Q. No. 2. (a) Explain the doctrine of 'part performance'. Marks : 10
'ಭಾಗಶಃ ನೆರವೇರಿಕೆ'ಯ ಸಿದ್ಧಾಂತದ ಬಗ್ಗೆ ವಿವರಿಸಿ.

OR/ಅಥವಾ

(a) Discuss the doctrine of fraudulent transfer and state the exception if any.
ಮೋಸದ ಹಸ್ತಾಂತರಣ ಸಿದ್ಧಾಂತವನ್ನು ಚರ್ಚಿಸಿ ಮತ್ತು ಇದಕ್ಕೆ ಯಾವುದಾದರೂ ಅಪವಾದಗಳಿದ್ದಲ್ಲಿ ತಿಳಿಸಿ.

Q. No. 2. (b) Write a note on 'Improvement made by a bonafide holder'. Marks : 6
ಅಕೃತಿಮವಾಗಿ ಹೊಂದಿರುವವನು ಅಭಿವೃದ್ಧಿಪಡಿಸಿದ್ದರ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

(b) 'A' purchases property by paying from out of his funds but in 'B's name who is his wife. After 'A's death 'B' sold the property to 'C', who purchased bonafidely for the value. Later 'A's son 'D' as a legal heir sues 'C' to recover the property. Can he succeed ? Give reason.
'A' ಎಂಬುವನು ತನ್ನ ಹಣದಿಂದ ತನ್ನ ಹೆಂಡತಿ 'B' ಎಂಬುವಳ ಹೆಸರಿನಲ್ಲಿ ಒಂದು ಸ್ಥಿರ ಸ್ವತ್ತನ್ನು ಕ್ರಯ ಮಾಡುವನು. 'A'ಯ ಮರಣಾನಂತರ 'B'ಯು ಈ ಸ್ವತ್ತನ್ನು 'C' ಎಂಬುವನಿಗೆ ಹಸ್ತಾಂತರಣ ಮಾಡುವಳು. 'A'ಯ ಮಗನಾದ 'D' ಎಂಬುವನು ಈ ಸ್ವತ್ತಿನ ಉತ್ತರಾಧಿಕಾರಿಯಾಗಿ ಈ ಸ್ವತ್ತು ತನಗೆ ಸೇರತಕ್ಕದ್ದು ಎಂದು ದಾವೆ ಹೂಡುವನು. ಈ ದಾವೆಯು ಊರ್ಜಿತಗೊಳ್ಳುವುದೇ ? ಕಾರಣ ನೀಡಿ.

UNIT – III

Q. No. 3. (a) What is mortgage and explain the kinds of mortgage. Marks : 10
ಅಡಮಾನ ಎಂದರೇನು ಹಾಗೂ ವಿವಿಧ ಪ್ರಕಾರದ ಅಡಮಾನಗಳನ್ನು ವಿವರಿಸಿ.

OR/ಅಥವಾ

(a) Define mortgage. Discuss the mortgagor's right of redemption.
ಅಡಮಾನವನ್ನು ವ್ಯಾಖ್ಯಾನಿಸಿ. ಅಡಮಾನದಾರನ ವಿಮೋಚನಾ ಹಕ್ಕನ್ನು ಚರ್ಚಿಸಿರಿ.

Q. No. 3. (b) Write a note on 'Charge". Marks : 6

"ಪ್ರಭಾರ"ದ ಮೇಲೆ ಟಿಪ್ಪಣಿ ಬರೆಯಿರಿ.

OR/ಅಥವಾ

(b) 'A' executes an usufructuary mortgage in favour of 'B' with a condition that if 'A' redeem within 10 years the mortgage shall become sale. Discuss the validity of it.

'A'ಯು 'B'ಗೆ ಭೋಗ್ಯದ ಅಡಮಾನವನ್ನು ಮಾಡಿಕೊಡುವಾಗ 10 ವರ್ಷಗಳ ಒಳಗೆ ವಾಪಸ್ಸು ಪಡೆಯದಿದ್ದಲ್ಲಿ ಅಡಮಾನವು ಮಾರಾಟವಾಗುವುದು ಎಂಬ ಷರತ್ತಿಗೆ ಒಪ್ಪಿರುತ್ತಾನೆ. ಈ ಷರತ್ತಿನ ಸಿಂಧುತ್ವವನ್ನು ವಿಮರ್ಶಿಸಿರಿ.

UNIT – IV

Q. No. 4. (a) Define sale and state the rights and duties of seller and buyer before completion of sale. Marks : 10

ವಿಕ್ರಯವನ್ನು ವ್ಯಾಖ್ಯಾನಿಸಿ ಮತ್ತು ಮಾರಾಟ ಪೂರ್ತಿಗೊಳ್ಳುವುದಕ್ಕಿಂತ ಮೊದಲು ಮತ್ತು ವಿಕ್ರಯ ಮುಗಿದ ಬಳಿಕ ಮಾರಾಟಗಾರ ಮತ್ತು ಖರೀದಿಗಾರರ ಹಕ್ಕು ಮತ್ತು ಬಾಧ್ಯತೆಗಳನ್ನು ತಿಳಿಸಿರಿ.

OR/ಅಥವಾ

(a) What is gift ? When gift may be revoked ?

ದಾನವೆಂದರೇನು ? ದಾನವನ್ನು ಯಾವಾಗ ರದ್ದುಗೊಳಿಸಬಹುದು ?

Q. No. 4. (b) Write a note on exchange of immovable property. Marks : 6

ಸ್ಥಿರ ಆಸ್ತಿಯ ವಿನಿಮಯದ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

(b) 'A' leases a mine to 'B' and an adjoining mine to 'C'. 'B' removes certain pillar in his mine. 'C' s mine suffers a subsidence and it is flooded. What is the remedy available to 'C' ?

'A'ಯು ತನ್ನ ಗಣಿಯನ್ನು 'B'ಗೆ ಗೇಣಿಯ ಆಧಾರದ ಮೇಲೆ ಕೊಟ್ಟಿರುತ್ತಾನೆ ಮತ್ತು ಅದರ ಪಕ್ಕದಲ್ಲಿರುವ ಗಣಿಯನ್ನು 'C'ಗೆ ಗೇಣಿಯ ರೂಪದಲ್ಲಿ ಕೊಟ್ಟಿರುತ್ತಾನೆ. 'B'ಯು ತನ್ನ ಗಣಿಯಲ್ಲಿರುವ ಕೆಲವು ಕಂಬಗಳನ್ನು ತೆಗೆದಿರುತ್ತಾನೆ ಅದರಿಂದ 'C'ಯ ಗಣಿಗೆ ನೀರು ಹರಿದು ಮಣ್ಣು ಕುಸಿದು ಹಾನಿಯಾಗುತ್ತದೆ. 'C'ಗೆ ಸಿಗುವ ಪರಿಹಾರವೇನು ?

UNIT – V

Q. No. 5. (a) Define trust and state how a trust is created. Marks : 10

ನ್ಯಾಸವನ್ನು ಪರಿಭಾಷಿಸಿ ಮತ್ತು ನ್ಯಾಸವನ್ನು ಹೇಗೆ ರಚಿಸಲಾಗುತ್ತದೆ ತಿಳಿಸಿ.

OR/ಅಥವಾ

(a) What are the rights and disabilities of a beneficiary ?

ಫಲಾನುಭಾವಿಯ ಹಕ್ಕುಗಳು ಮತ್ತು ಅನರ್ಹತೆಗಳು ಯಾವುವು ?

Q. No. 5. (b) Write a note on 'Certia que trust'. Marks : 6

'ನ್ಯಾಸ ಫಲಾನುಭಾವಿಯ' ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

(b) Write a note on classification of trust.

ನ್ಯಾಸದ ವರ್ಗೀಕರಣದ ಬಗ್ಗೆ ಟಿಪ್ಪಣಿ ಬರೆಯಿರಿ.